ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 21/3/2020

# ಕೆಪಿಎಸ್‌ಸಿ ನೇಮಕಾತಿ ಬಿಕ್ಕಟ್ಟು ಸಂಪುಟದಲ್ಲಿ ನಿರ್ಧಾರ

ವಿಧಾನಸಭೆ : 2011 ಬ್ಯಾಚಿನ ಕೆಪಿಎಸ್‌ಸಿ ನೇಮಕಾತಿ ಕುರಿತು ಸಚಿವ ಸಂಪುಟ ಸಭೆಯ ಮುಂದೆ ತಂದು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದರು.

ನಿಯಮ 69 ರ ಅಡಿ ಅನೇಕ ಸದಸ್ಯರು 2011 ರ ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ 362 ಜನರಿಗೆ ಅನ್ಯಾಯವಾಗಿದೆ. ಅವರ ಜೀವನವೇ ಅತಂತ್ರವಾಗಿದೆ. ಸರ್ಕಾರ ಅಭ್ಯರ್ಥಿಗಳ ನೆರವಿಗೆ ಬಂದು ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದರು.



ಇದಕ್ಕೆ ಉತ್ತರ ನೀಡಿದ ಕಾನೂನು ಸಚಿವ ಮಾಧುಸ್ವಾಮಿ ಅವರು, ಈ ಪ್ರಕರಣದ ಬಗ್ಗೆ ನ್ಯಾಯಾಲಯ ಈಗಾಗಲೇ ತೀರ್ಪು ನೀಡಿದೆ. ಹಿಂದೆ ಅಡ್ವೋಕೇಟ್ ಜನರಲ್ ಅವರೂ ಸಹ ವರದಿ ನೀಡಿದ್ದಾರೆ. ಆದರೂ. ಸಿದ್ದರಾಮಯ್ಯ ಅವರ ಸರ್ಕಾರ ಕೆಲವು ಅಭ್ಯರ್ಥಿಗಳಿಗೆ ಕೆಲಸಕ್ಕೆ ಹಾಜರಾಗುವ ಆದೇಶ ನೀಡಿತ್ತು. ಆದರೆ ಇದನ್ನು ಪ್ರಶ್ನಿಸಿ ಅಭ್ಯರ್ಥಿಗಳು ನ್ಯಾಯಾಲಯದ ಮೊರೆ ಹೋದರು. ಇದರಿಂದಾಗಿ ಕೆಲಸಕ್ಕೆ ಹಾಜರಾಗಿದ್ದ ಅಭ್ಯರ್ಥಿಗಳೂ ಸಹ ಕೆಲಸ ಕಳೆದುಕೊಂಡರು.

ಈ ಪ್ರಕರಣದಲ್ಲಿ ಲಂಚ ಪಡೆಯಲಾಗಿದೆ ಎಂಬ ಯಾವುದೂ ಸರ್ಕಾರದ ಮುಂದೆ ಇಲ್ಲ. ಕೆಎಟಿ ಆದೇಶದಂತೆ ಎಲ್ಲವೂ ನಡೆಯುಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಈಗ ಹೇಗಾಗಿದೆ ಎಂದರೆ ಎಲ್ಲಿಯೂ ನಿಂತು ನಾವು ನ್ಯಾಯ ಕೇಳಲು ಆಗುವುದಿಲ್ಲ. ಹಿಂದಿನ ಹಾಗೂ ನಮ್ಮ ಸರ್ಕಾರವೂ ಅಭ್ಯರ್ಥಿಗಳ ಪರವಾಗಿಯೇ ಇದೆ. ಅವರ ಬಗ್ಗೆ ಸಹಾನುಭೂತಿ ಇದೆ. ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದೆ. ನಾವು ಏನೇ ಹೇಳಬೇಕು ಎಂದರೆ ನ್ಯಾಯಾಲಯದ ಮುಂದೆಯೇ ಹೇಳಬೇಕು. ಮುಂದೆ ಏನು ಮಾಡಬೇಕು ಎಂದು ನಮಗೂ ತಿಳಿಯುತ್ತಿಲ್ಲ. ಸ್ವಲ್ಪ ಕಾಲಾವಕಾಶ ಬೇಕು. ಕಾನೂನು ತಜ್ಞರು, ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಅಭ್ಯರ್ಥಿಗಳ ವಿರೋಧಿಗಳಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಕಾಂಗ್ರೆಸ್ ಸದಸ್ಯ ಎಚ್.ಕೆ. ಪಾಟೀಲ್ ಅವರು, ಸಹಾಯಕ ಅಡ್ವೋಕೇಟ್ ಜನರಲ್ ಅವರ ಹೇಳಿಕೆಯಿಂದಾಗಿ ಈ ಎಲ್ಲ ತೊಂದರೆಗಳಾಗಿವೆ ಎಂದು ಹೇಳುತ್ತಿದ್ದೀರಿ. ನೀವು ಅಧಿಕಾರಿಗಳ ಮರ್ಜಿ ಕಾಯುತ್ತಿದ್ದೀರಿ. ರೂಲ್ 322(2) ಪ್ರಕಾರ ಇದು ತಪ್ಪಾಗಿದೆ. ಬಿ.ಕೆ. ಪವಿತ್ರ ಪ್ರಕರಣದಂತೆ ಇದನ್ನೂ ಪರಿಗಣಿಸಿ ಆದೇಶ ನೀಡಿ. ಅನ್ಯಾಯ ಸರಿಪಡಿಸುವುದಕ್ಕೆ ಈ ವೇದಿಕೆಗಿಂತ ಬೇರೆ ಬೇಕೇ? ಪ್ರಶ್ನಿಸಿದರು. ಆಗ ಮಾಧುಸ್ವಾಮಿ ಅವರು ಇದು ಎಲ್ಲರ ಜವಾಬ್ದಾರಿ. ಹಿಂದಿನ ಸರ್ಕಾರಗಳೂ ಇದರ ಬಗ್ಗೆ ಪ್ರಯತ್ನ ಪಡಬಹುದಾಗಿತ್ತು. ಆದರೆ ಕೆಎಟಿ ಆದೇಶ ಬಂದಿತ್ತು. ಇದು ಯಾರ ಮೇಲೆ ಆಪಾದನೆ ಅಲ್ಲ ಎಂದರು.

ಆಗ ಮಧ್ಯೆ ಪ್ರವೇಶಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಕಾನೂನು ಸಚಿವರ ಭಾವನೆ ಸ್ಪಷ್ಟವಾಗಿದೆ. ಈ ಕುರಿತು ನಾನು ಈಗಾಗಲೇ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಈಗ ಆದೇಶ ಹೊರಡಿಸಿ. ನ್ಯಾಯಾಂಗ ನಿಂದನೆ ಆಗುತ್ತದೆ ಎಂಬುದು ನಿಮ್ಮಲ್ಲಿ ಇದೆ. ಈಗ ಒಂದೇ ದಾರಿ ಎಂದರೆ ನೀವು ಎಲ್ಲ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಬೇಕು ಎಂದು ಹೇಳಿದಾಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಮಗೆ ಆ ಅಭ್ಯರ್ಥಿಗಳ ಬಗ್ಗೆ ಸಹಾನುಭೂತಿ ಇದೆ. ಸಚಿವ ಸಂಪುಟದ ಮುಂದೆ ಇಟ್ಟು ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದರು.